## ‘ದೇಗುಲಕ್ಕೆ ಹೋಗಲ್ಲ’



# ಬಾನ್ಸುರಿಯಲ್ಲೇ ದೇವರ ಕಾಣುವೆ

ಸಂಗೀತವೇ ಧ್ಯಾನ, ಬಾನ್ಸುರಿಯೇ ಉಸಿರು. ಇದೊಂದು ಯೋಗ. ಬಾನ್ಸುರಿ ನಾದದಲ್ಲಿ ಕೃಷ್ಣನನ್ನು ಕಾಣುತ್ತೇನೆ ಎನ್ನುತ್ತಾರೆ ವಿಶ್ವವಿಖ್ಯಾತ ಬಾನ್ಸುರಿ ಮಾಂತ್ರಿಕ, ಪದ್ಮಭೂಷಣ ಪಂ. ಹರಿಪ್ರಸಾದ್ ಚೌರಾಸಿಯ.

■ ಉಮಾ ಅನಂತ್

‘ಮ್ಯೂಸಿಕ್ ಈಸ್ ಮೈ ಲವ್. ಐ ವಿಲ್ ಫೈಂಡ್ ಲಾರ್ಡ್ ಕೃಷ್ಣ ಇನ್ ಬಾನ್ಸುರಿ. ಮ್ಯೂಸಿಕ್ ವಿಲ್ ಗ್ಲೋ. ಇಟ್ ವಿಲ್ ಚೇಂಜ್ ದಿ ಮೂಡ್ ಅಂಡ್ ಮೆಂಟಾಲಿಟಿ ಆಫ್ ದಿ ಪೀಪಲ್...’ ಎನ್ನುತ್ತಲೇ ಸಂಗೀತದ, ಕೊಳಲು ವಾದನದ ಹೂರಣವನ್ನು ಮಾತಿನಲ್ಲೇ ಕಟ್ಟಿಕೊಟ್ಟರು ವಿಶ್ವವಿಖ್ಯಾತ ಬಾನ್ಸುರಿ ವಾದಕ ಪಂ. ಹರಿಪ್ರಸಾದ್ ಚೌರಾಸಿಯ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಗರದ ಆನಂದಿ ಆರ್ಟ್ ಪ್ರತಿಷ್ಠಾನ ಆಯೋಜಿಸಿದ್ದ ‘ಭಾವ’ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಜೀವಮಾನದ ಸಂಗೀತ ಸಾಧನೆಗಾಗಿ ಸನ್ಮಾನ ಸ್ವೀಕರಿಸಲು ಬಂದಿದ್ದ ಎಂಬತ್ತರ ಹರೆಯದ ಈ ಪರಿಪಕ್ವ ಬಾನ್ಸುರಿ ಮಾಂತ್ರಿಕ ‘ಸುಧಾ’ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ತಮ್ಮ ಸಾಧನೆಯ ಹಾದಿಯನ್ನು, ಸಂಗೀತ ಪಯಣವನ್ನು ಬಿಚ್ಚಿಟ್ಟರು.

◆ **ಬಾನ್ಸುರಿಯಲ್ಲಿ ಮೀಂಡ್, ಗಮಕಗಳು, ಮನೋಧರ್ಮ, ಸ್ವರಪ್ರಸ್ತಾರ... ಮುಂತಾದ ವಿವಿಧ ವಿಚಾರಗಳಲ್ಲಿ ನೀವು ಸಿದ್ಧಹಸ್ತರು. ಆದರೆ ಈ ಎಲ್ಲ ಅಂಶಗಳು ಕಲಾವಿದರಿಂದ ಕಲಾವಿದರಿಗೆ ಭಿನ್ನವಾಗಿರುತ್ತವೆ. ಅದು ಹೇಗೆ?**

ಬಾನ್ಸುರಿ ನುಡಿಸಾಣಿಕೆಯಲ್ಲಿ ಮೀಂಡ್ (ಸ್ವರಗಳ ಜಾರುವಿಕೆ) ಕಲಾವಿದನ ಚಾಕಚಕ್ಯತೆ, ಸಾಮರ್ಥ್ಯ ಹಾಗೂ ರಾಗ, ಭಾವ ತಾಳಗಳ ಗ್ರಹಿಸುವಿಕೆ, ಪ್ರಸ್ತುತಪಡಿಸುವಿಕೆ ಮೇಲೆ ಅವಲಂಬಿತವಾಗಿರುತ್ತದೆ. ಇಲ್ಲಿ ಕೌಶಲ್ಯ ಹಾಗೂ ಸೃಜನಶೀಲತೆ ಕೆಲಸ ಮಾಡುತ್ತದೆ. ಮನೋಧರ್ಮವೂ ಹಾಗೆ ಕಲಾವಿದನಿಂದ ಕಲಾವಿದನಿಗೆ ಬೇರೆ ಬೇರೆಯಾಗಿರುತ್ತದೆ. ಗಮಕ, ಸ್ವರಪ್ರಸ್ತಾರದಲ್ಲಿ ಸಿದ್ಧಿ ಎಲ್ಲವೂ ಅನುಭವ, ಸತತ ಸಾಧನೆಯಿಂದ ಬರುವಂಥದ್ದು. ನುಡಿಸಾಣಿಕೆಯಲ್ಲಿ ಅಪಾರವಾದ ಶ್ರದ್ಧೆ ಹಾಗೂ ಸಂಗೀತದಲ್ಲಿ ತಲ್ಲೀನತೆ ಇದ್ದರೆ ಇವೆಲ್ಲವನ್ನೂ ಸಿದ್ಧಿಸಿಕೊಳ್ಳಬಹುದು. ಜೊತೆಗೆ ಸ್ವರಶುದ್ಧತೆ, ಲಯದ ನಿಖರತೆ ಹಾಗೂ ರಾಗ ವೈವಿಧ್ಯಗಳು ಬಾನ್ಸುರಿ ವಾದನದಲ್ಲಿ ಕೇಳುಗರಿಗೆ ವಿಶಿಷ್ಟ ಅನುಭವ ನೀಡುತ್ತದೆ. ಹೀಗಾಗಿ ವಿದೇಶೀಯರೂ ಭಾರತೀಯ ಶೈಲಿಯ ಕೊಳಲು ವಾದನವನ್ನು ಬಹುವಾಗಿ ಪ್ರೀತಿಸುತ್ತಾರೆ. ಹಾಗೆಂದು ವಿದೇಶದಲ್ಲಿ ಕೊಳಲು ಇಲ್ಲವೆಂದಲ್ಲ. ಅಲ್ಲಿಯ ಕಲಾವಿದರು ಮೂಳೆಯಿಂದ, ಕಂಚಿನಿಂದ, ಕಲ್ಲಿನಿಂದ, ಮೆಟಲ್‌ನಿಂದ ಮಾಡಿದ ಕೊಳಲು ನುಡಿಸುತ್ತಾರೆ. ಆದರೆ ಇದರ